O.S 238-2018
DW-4

**ಸಾಕ್ಷಿದಾರರನ್ನು ಕರೆಯಿಸಲಾಯಿತು** **ಪ್ರಮಾಣ ವಚನ ಬೋಧಿಸಲಾಯಿತು**

ದಿನಾಂಕ: **03.02.2026.**

**ಪಾಟೀ ಸವಾಲು:-** ಶ್ರೀ ಎಸ್ ಆರ್ ಎಸ್ ಪ್ರತಿವಾದಿಯ ಪರ ವಕೀಲರಿಂದ

ವಾದಿಗಳು ಲೇಟ್ ಮಲ್ಲೇಗೌಡನ ಮಕ್ಕಳು ಎಂದರೆ ಸರಿ. ಸದರಿ ಮಲ್ಲೇಗೌಡರಿಗೆ ಎರಡನೇ ಪ್ರತಿವಾದಿ ಒಬ್ಬನೇ ಗಂಡು ಮಗ ಎಂದರೆ ಸರಿ. ಒಂದನೇ ಪ್ರತಿವಾದಿ ಎರಡನೇ ಪ್ರತಿವಾದಿಯ ತಾಯಿ ಎಂದರೆ ಸರಿ. 1 ವಾದಿಯು ಈ ಹಿಂದೆ ಅಸಲು ದಾವೆ 656/2012 ಅನ್ನುಹಾಕಿದ್ದು ಆ ಬಗ್ಗೆ ಗೊತ್ತ ಎಂದರೆ ಸಾಕ್ಷಿಯ ಇಲ್ಲ ಎಂದು ನುಡಿಯುತ್ತಾರೆ. ಮಲ್ಲೇಗೌಡರು ಮರಣ ಹೊಂದಿ ಸುಮಾರು 10 ವರ್ಷ ಆಗಿದೆ. ಸದರಿಯವರು ಮರಣ ಹೊಂದಿದಾಗ ಅವರಿಗೆ 75-80 ವರ್ಷ ಆಗಿತ್ತು. ಅವರು ಆರೋಗ್ಯವಾಗಿ ಚೆನ್ನಾಗಿದ್ದರು. ಅವರು ಸತ್ತಾಗ ಅವರಿಗೆ 93 ವರ್ಷ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಮಂಚೇನಹಳ್ಳಿಯಲ್ಲಿರುವ ಎಲ್ಲಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳಾಗಿದ್ದು ರಾಗಿಬೊಮ್ಮೇನಹಳ್ಳಿಯಲ್ಲಿ ಇರುವ ಆಸ್ತಿಯನ್ನು ಖರೀದಿಸಿದ್ದರು ಎಂದರೆ ಸರಿ. ಅವರನ್ನು ಊರಿನಲ್ಲಿ ಮಲ್ಲಪ್ಪ ಎಂದು ಕರೆಯುತ್ತಿದ್ದರು ಎಂದರೆ ಸರಿ. ಅವರು ವ್ಯವಸಾಯ ಮತ್ತು ಗಾಣದ ಕೆಲಸ ಮಾಡುತ್ತಿದ್ದರು. ವ್ಯವಸಾಯದ ಆದಾಯವನ್ನುಹೊರತುಪಡಿಸಿದರೆ ಬೇರೆ ಯಾವುದೇ ಆದಾಯ ಅವರಿಗೆ ಇರಲಿಲ್ಲ ಎಂದರೆ ಸರಿಯಲ್ಲ. ಈ ರೀತಿ ಪಿತ್ರಾರ್ಜಿತ ಸ್ವತುಗಳಿಂದ ಬಂದ ಆದಾಯದಿಂದ ಎರಡು ಎಕರೆ ಭೂಮಿಯನ್ನು ರಾಗಿಬೊಮ್ಮೇನಹಳ್ಳಿಯಲ್ಲಿ ಖರೀದಿಸಿದ್ದರು ಎಂದರೆ ಸಾಕ್ಷಿ ಗಾಣದ ಹಣದಿಂದ ಖರೀದಿಸಿದ್ದರು ಎಂದು ನುಡಿಯುತ್ತಾರೆ. ಸದರಿ ಸ್ವತ್ತನ್ನು ಎಷ್ಟು ಮೊತ್ತಕ್ಕೆ ಯಾವಾಗ ಖರೀದಿಸಿದ್ದರು ಎಂದು ನನಗೆ ಗೊತ್ತಿಲ್ಲ. ಈ ದಾವೆಯನ್ನು ಹಾಕುವ ಮೊದಲು ಒಂದನೇ ವಾದಿ ಮತ್ತು ಇತರರು ಮಲ್ಲೇಗೌಡರ ವಿರುದ್ಧ ಅಸಲು ದಾವೆ 656/2012 ಅನ್ನು ಹಾಕಿದ್ದರು ಎಂದರೆ ಸರಿ. ನಿಮಗೆ ಎಲ್ಲಾ ವ್ಯವಸ್ಥೆಯನ್ನು ಮಾಡಿಕೊಡುತ್ತೇವೆ ಎಂದು ಹೇಳಿದ ಕಾರಣ ಆ ದಾವೆಯನ್ನು ವಾಪಸ್ಸು ತೆಗೆಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅಸಲು ದಾವಾ 656/2012 ಅನ್ನು ವಾಪಸ್ಸು ತೆಗೆದು ನಂತರ ಮತ್ತು ಮಲ್ಲೇಗೌಡರ ವಯಸ್ಸನ್ನು ದುರುಪಯೋಗ ಪಡಿಸಿಕೊಂಡು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ವಿಲ್ ಮತ್ತು ದಾನ ಪತ್ರಗಳನ್ನು ಮಲ್ಲೇಗೌಡರಿಂದ ಎರಡನೇ ಪ್ರತಿವಾದಿಯು ತಮ್ಮ ಹೆಂಡತಿ ಮತ್ತು ಮಕ್ಕಳಿಗೆ ಸೃಷ್ಟಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮಲ್ಲೇಗೌಡರಿಗೆ ಮರಣ ಹೊಂದುವ ಮೊದಲು ಅವರಿಗೆ 93 ವರ್ಷಗಳಾಗಿದ್ದು ಅದನ್ನು ದುರುಪಯೋಗ ಪಡಿಸಿಕೊಂಡು ವಾದಿಗಳಿಗೆ ಭಾಗ ಕೊಡಬೇಕಾಗುತ್ತದೆ ಎಂದು ವಿಲ್ ಮತ್ತು ದಾನ ಪತ್ರಗಳನ್ನು ಎರಡನೇ ಪ್ರತಿವಾದಿ ಸೃಷ್ಟಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಮಲ್ಲೇಗೌಡರು 2005-2006 ರಲ್ಲಿ ಜಯರಾಮ ಮತ್ತು ಅಣ್ಣಯ್ಯ ಎಂಬುವವಗೆ ಎರಡು ಐಟಂ ಸ್ವತ್ತುಗಳನ್ನು ಮಾರಾಟ ಮಾಡಿರುವುದು ನನಗೆ ಗೊತ್ತು. ಸದರಿ ಕ್ರಯಪತ್ರ ನೊಂದಣಿಯಾಗಿರುತ್ತದೆ. ನಾನು ಹೇಳಿದಂತೆ ಯಾವುದೇ ಸ್ವತ್ತನ್ನು ಕ್ರಯಪತ್ರ ಮಾಡಿಕೊಟ್ಟಿರುವುದಿಲ್ಲ ಮತ್ತು ವಾದಿಗೆ ಭಾಗ ಕೊಡಬೇಕಾಗುತ್ತದೆ ಎಂದು ಆ ರೀತಿ ಕರಾರು ಪತ್ರಗಳನ್ನುಸೃಷ್ಟಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಎರಡನೇ ಪ್ರತಿವಾದಿಯ ವಿಶ್ವಾಸದಿಂದ ಇರುವ ಕಾರಣದಿಂದ ಅವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀಸವಾಲಿಗೆ ಸಮಯ ಕೇಳಿದ್ದು ಮುಂದೂಡಲಾಯಿತು**

**ಮರುವಿಚಾರಣೆಃ ಇಲ್ಲ**
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.,

1ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ **03.02.2026**